ಒಮ್ಮೆಲೆ ನುಗ್ಗಿ ಬರುವ ಅಪಾಯ ಇದ್ದೇ ಇರುತ್ತದೆ. ಹೀಗೆ ಅನೇಕ ಸಲ ಸಡನ್ನಾಗಿ ಏಳಲು ಹೋಗಿ ಮಕಾಡೆ ಬಿದ್ದ ಫಜೀತಿಗಳಿಗೆ ಲೆಕ್ಕವೇ ಇಲ್ಲ. ಅದೇ ಮರದ ಕೊಂಬೆಯ ಮೇಲೆ ಸಿಗುವ ಹಾವುಗಳ ಚಿತ್ರ ತೆಗೆಯುವುದು ಕೊಂಚ ಸುಲಭದ ಕೆಲಸ. ಮಳೆಗಾಲದಲ್ಲಂತೂ ಕ್ಯಾಮೆರಾವನ್ನು ಸಂರಕ್ಷಿಸಿಕೊಂಡು, ಹಾವಿನ ಭಯವನ್ನೂ ನಿಭಾಯಿಸಿಕೊಂಡು ಫ್ಲಾಷ್ ಬಳಸಿ ಪಟ ತೆಗೆಯುವುದು ದುಸ್ಸಾಹಸ ಕಸುಬು.

ಕಾಳಿಂಗ ಸರ್ಪಕ್ಕಿಂತ ಹೆಚ್ಚು ಉಗ್ರ ಎಂದರೆ ನಾಗರಹಾವು. ಇದು ಕಾಳಿಂಗದಷ್ಟು ಸೌಮ್ಯವಲ್ಲ. ನೆಗೆದು ಕಚ್ಚಲೂ ಇದು ಹೇಸುವುದಿಲ್ಲ. ಭಾರತದಲ್ಲಿ ಹೆಚ್ಚು ಜನ ಸತ್ತಿರುವುದು ಇದರ ಕಡಿತದಿಂದಲೇ. ಮಳೆಗಾಲ ಶುರುವಾದರೆ ಮಲೆನಾಡಿನಲ್ಲಿ ಮಲಬಾರ್ ಪಿಟ್‌ವೈಪರ್ ಎಂಬ ಹಾವಿನ ಓಡಾಟ ಹೆಚ್ಚಾಗಿರುತ್ತದೆ. ಇದಕ್ಕೆ ಗುಳಿ ಮಂಡಲ, ಹಪ್ಪಟ್ಟೆ ಹಾವು ಎಂದೂ ಕರೆಯುತ್ತಾರೆ. ಅಡಿಕೆ ತೋಟಗಳಲ್ಲಿ ಕಾಳುಮೆಣಸಿನ ಬಳ್ಳಿಗಳ ಒಳ ಸುಳಿಗಳಲ್ಲಿ ಮಲಗುವ ಇದು ಕೂಲಿ ಕಾರ್ಮಿಕರಿಗೆ, ರೈತರಿಗೆ ಹೆಚ್ಚು ಬಾಧೆ ಕೊಡುವ ಉರಗ.

ಈ ಪ್ರಭೇದದಲ್ಲಿ ಬಣ್ಣಬಣ್ಣದ ಹಲವಾರು ಹಾವುಗಳಿವೆ. ನೋಡಲು ಚಿಕ್ಕಗಾತ್ರದಲ್ಲಿದ್ದರೂ ಪಕ್ಕಾ ವಿಷಕಾರಿ. ಸುಮ್ಮನೆ ಮರದ ಬುಡಕ್ಕೆ ಆತುಕೂತು ವಾರ ತಿಂಗಳು ತನ್ನ ಬೇಟೆಗಾಗಿ ಕಾಯುವ ತಾಳ್ಮೆ ಇದಕ್ಕಿದೆ. ಹಳದಿ, ಕೆಂಪು, ಹಸಿರು, ನೀಲಿ ಮತ್ತು ಗೋಧಿ ಬಣ್ಣದ ಇದರ ಅನೇಕ ತಳಿಗಳು ಮಲೆನಾಡಲ್ಲಿ ನೋಡಲು ಸಿಕ್ಕಿವೆ. ಇವುಗಳ ಹತ್ತಿರ ಹೋಗಿ ಫೋಟೊ ತೆಗೆಯುವಾಗ ಮಾತ್ರ ಸದಾ ಜೀವ ಬಾಯಿಗೆ ಬಂದಿರುತ್ತದೆ. ಮ್ಯಾಕ್ರೋ ಲೆನ್ಸ್ ಬಳಸಿ ಇದರ ಚಿತ್ರ ತೆಗೆಯಲು ಹತ್ತಿರ... ಇನ್ನೂ ಹತ್ತಿರ ಹೋಗಲೇ ಬೇಕಲ್ಲವೇ?

ಅಷ್ಟೇನೂ ವಿಷಕಾರಿಯಲ್ಲದ ಅನೇಕ ಹಾವುಗಳು ನೋಡಲು ಹೆಚ್ಚು ಸುಂದರವಾಗಿರುತ್ತವೆ. ಒಮ್ಮೆ ರಾತ್ರಿ ಸುರಿಯುವ ಮಳೆಯಲ್ಲಿ ಸಿಕ್ಕ ಥ್ಯಾಕರೆ ಬೆಕ್ಕಿನ ಕಣ್ಣು ಹಾವಿನ ಚಿತ್ರ ಮರೆಯಲಾಗದ್ದು. ಅದು ತನ್ನ ಸೀಳು ನಾಲಿಗೆ ಹೊರ ತೆಗೆಯುವ ತನಕ ಕಾಯುವುದೇ ದೊಡ್ಡ ಗೋಳು. ಅಂಥದ್ದೊಂದು ಚಿತ್ರಕ್ಕಾಗಿ ಹಪಹಪಿಸುವುದು ಛಾಯಾಚಿತ್ರಕಾರರ ದೊಡ್ಡ ಕನಸು. ಅಶೋಕ ಬ್ರಾನ್ಸ್ ಎಂಬ ಹಾವು ಕೂಡ ವಿಷವಲ್ಲದ ಮೋಹಕ ಜೀವಿ. ಇದು ಮತ್ತೆ ಮತ್ತೆ ಸಿಕ್ಕು ನಮ್ಮನ್ನು ಮಾತಾಡಿಸಬಲ್ಲಷ್ಟು



ಪರಿಚಿತ. ಮಲೆನಾಡಲ್ಲಿ ಹೆಚ್ಚಾಗಿ ಸಿಗುವ ಗ್ರೀನ್ ವೈನ್ ಸ್ನೇಕ್ ಹಸಿರೆಲೆಗಳ ನಡುವೆ ಇರಬಲ್ಲ ಖಡಕ್ ಬೇಟೆಗಾರ ಜೀವಿ. ಕಡು ಹಸಿರ ಗಿಡದಲ್ಲಿ ಈ ಹಾವು ಇದ್ದರೂ ಬೇಗ ಕಂಡು ಹಿಡಿಯುವುದೇ ಕಷ್ಟ. ಹೆಚ್ಚು ಉಪದ್ರವಲ್ಲದ, ತೀವ್ರ ವಿಷಕಾರಿಯಲ್ಲದ ಈ ಸೌಮ್ಯ ಹಾವುಗಳನ್ನೂ ಜನ ಅಪಾಯ ಎಂದು ಭಾವಿಸಿ ಕೊಂದೇ ಹಾಕುತ್ತಾರೆ. ಯಾವ ಹಾವು ವಿಷದ್ದು ಯಾವುದು ಅಲ್ಲವೆಂದು ಗುರುತಿಸುವ ಮೊದಲೇ ಸಾಯಿಸಿ ಬಿಡುವುದು ಜನರಿಗೆ ಸಲೀಸು ಎನಿಸಿಬಿಟ್ಟಿದೆ.

ಆಗಸದೆತ್ತರದ ಮರಗಳ ಮೇಲೆ ಕೂತು ನೆಲದ ಚಟುವಟಿಕೆಗಳನ್ನು ಗಮನಿಸುವ ಕ್ರಿಸೊಪೆಲಿಯಾ ಒರ್ನಾಟಾ ಎಂಬ ವಿಶೇಷ ಹಾವೊಂದಿದೆ. ಇದು ಗಾಳಿಯಲ್ಲಿ ಹಾರಬಲ್ಲ ಸಾಮರ್ಥ್ಯವಿರುವ ಜೀವಿ. ಇದನ್ನು ನೋಡುವ ತವಕ ಬಹಳ ದಿನದಿಂದ ಇತ್ತು. ಎತ್ತರದ ಮರದ ಮೇಲಿಂದ ಛಂಗನೆ ಕೆಳಗೆ ಜಿಗಿಯುವ ಇದನ್ನು ನೋಡಲು ನಾನು ಶ್ರೀಕಾಂತ್ ಅಲೆದಾಡದ ಜಾಗಗಳೇ ಇಲ್ಲ. ನಾ ಕಂಡ ಅತಿ ಸುಂದರ ಮೈಮಾಟದ ಚಲುವಿನ ಬಳ್ಳಿಯಿದು. ತೇಜಸ್ವಿಯವರ ಕರ್ವಾಲೋ